

ಅಮಿತಾಭ್ ಬಚ್ಚನ್ ಮತ್ತು ರಾಜ್‌ಕುಮಾರ್ ಜೊತೆಯಲ್ಲಿ ನಂದಿಬೆಟ್ಟದಲ್ಲಿ ಬಾಲಪ್ರತಿಭೆ ಲೋಹಿತ್ (ಪುನೀತ್)
ಚಿತ್ರ: ಡಿ.ಸಿ. ನಾಗೇಶ್

## ಮಾತು ಮೆಲುಕು

ಅಮ್ಮ ಯಾವಾಗಲೂ ಆಫೀಸ್ ಕೆಲಸಗಳಲ್ಲಿ ಬಿಜಿಯಾಗಿರುತ್ತಿದ್ದರು. ನನಗೂ ಏನಾದರೂ ಮಾಡುತ್ತಿರಬೇಕು, ಕೆಲಸದಲ್ಲಿ ತೊಡಗಿಕೊಳ್ಳಬೇಕು, ಸಂಪಾದನೆ ಮಾಡಬೇಕು ಅನಿಸುತ್ತಿತ್ತು. 'ನನ್ನದು' ಅಂತ ಒಂದು ಐಡೆಂಟಿಟಿ ಹುಡುಕಿಕೊಳ್ಳಬೇಕು ಎನ್ನುವುದನ್ನು ಅಮ್ಮನನ್ನು ನೋಡಿಯೇ ಕಲಿತೆ. ನನ್ನ ಅಮ್ಮನ ಹಾಗೆ ಚೆನ್ನಾಗಿ ದುಡಿದು ಸಂಪಾದನೆ ಮಾಡಬೇಕು, ಇತರರಿಗೆ ಕೆಲಸ ಕೊಡುವ ಮಟ್ಟಕ್ಕೆ ಬೆಳೆಯಬೇಕು ಎಂಬೆಲ್ಲ ಆಸೆಗಳಿಗೆ ಸ್ಫೂರ್ತಿಯಾಗಿದ್ದು ಅವರೇ.

ಕಾಪಾಡಿಕೊಂಡಿದ್ದರು ಅವರು. ಅದನ್ನು ಬಿಟ್ಟು ಅವರು ನನಗೆ ದಕ್ಕಿದ ಬಗ್ಗೆ ಹೇಳಬೇಕೆಂದರೆ, ಆತ ತೀಕ್ಷ್ಣ ಹುಡುಕಾಟದ ಮನುಷ್ಯ. ಯಾರೋ ಏನೋ ಹೊಸದನ್ನು ಮಾಡಿದ ವ್ಯಕ್ತಿ ಹತ್ತಿರದಲ್ಲಿದ್ದಾರೆಂದರೆ ಅವರೊಟ್ಟಿಗೆ ಅವರು ಮಾತಾಡಲೇಬೇಕು. ಫೋಟೋಶೂಟ್‌ಗೆ ಬಂದಾಗ ಅದಷ್ಟೇ ಕೆಲಸ ಅಲ್ಲ. 'ಇದ್ಯಾವ ಕ್ಯಾಮೆರಾ? ಈ ಲೆನ್ಸ್ ಏಕೆ?' ಎಂದು ಮೊದಮೊದಲು ಕೇಳುತ್ತಿದ್ದರು. ಮರುಭೇಟಿಯಲ್ಲಾಗಲೇ ಅದರ ಬಗ್ಗೆ ಸಾಕಷ್ಟು ತಿಳಿದುಕೊಂಡು, 'ಈಗ ಮಾರ್ಕ್‌ಫೋರ್ ಬಂದಿದೆಯಲ್ಲಾ? ಅದರ ಸೆನ್ಸರ್ ಸೈಜ್ ದೊಡ್ಡದು ಮಾಡಿದ್ದಾರೆ. ವಿಡಿಯೊ ಕೂಡ ತೆಗೀಬಹುದಂತೆ. ಅದರಲ್ಲಿ ಸಿನಿಮಾ ಮಾಡಬಹುದಾ?' ಎಂಬೆಲ್ಲ ಪ್ರಶ್ನೆಗಳ ಸರಮಾಲೆಯೇ ಇರುತ್ತಿತ್ತು.

ಅವರು ಸಿಕ್ಕಾಗಲೆಲ್ಲ ಕೇಳುತ್ತಿದ್ದ ಮೊದಲ ಪ್ರಶ್ನೆ 'ಮತ್ತೇನು? ಯಾವ ಸಿನಿಮಾ ನೋಡಿದ್ರಿ?' ಅನ್ನುವುದಾಗಿತ್ತು. ಅದ್ಯಾವಾಗ ಅವರ ಶೂಟಿಂಗುಗಳ ಮಧ್ಯ ಪ್ರಪಂಚದ ಸಿನಿಮಾಗಳನ್ನು ನೋಡುತ್ತಿದ್ದರೋ ಗೊತ್ತಿಲ್ಲ. ಆಗೆಲ್ಲ ಈಗಿನಷ್ಟು ಸಲೀಸಾಗಿ ಇರಾನಿಯನ್ ಅಥವಾ ಇತರೆ ದೇಶದ ಸಿನಿಮಾ ಸಿಗುತ್ತಿರಲಿಲ್ಲ. ನನ್ನ ಸ್ನೇಹಿತರ ವಲಯದಲ್ಲಿ ನನಗೆ ಸಿಗುತ್ತಿತ್ತು. ಸಿಕ್ಕದ್ದನ್ನು ಅವರಿಗೂ ಹಂಚುತ್ತಿದ್ದೆ. ಪ್ರಪಂಚದ ಸಿನಿಮಾ ಹೋಗುತ್ತಿರುವ ದಾರಿಯ ಬಗ್ಗೆ ಅವರಿಗೆ ಬಹಳ ಕುತೂಹಲವಿತ್ತು. ಕೊಂಚ ಸಮಯ ಸಿಕ್ಕರೂ 'ಯೂಟ್ಯೂಬ್'ನಲ್ಲಿ ಯಾವುದೋ ಹೊಸ ಟೆಕ್ನಾಲಜಿಯ ವಿಡಿಯೊ ನೋಡುತ್ತ ಕೂಡುತ್ತಿದ್ದರು.

### ವ್ಯವಹಾರದ ಆಸಕ್ತಿಯೂ ಇತ್ತು

ಅವರಿಗಿದ್ದ ಇನ್ನೊಂದು ಆಸಕ್ತಿ ಹೊಸದೇನಾದರೂ ಬ್ಯುಸಿನೆಸ್‌ನಲ್ಲಿ ತೊಡಗಿಕೊಳ್ಳುವುದು. ಕಾರಣ ಇಷ್ಟೆ, ಹೆಚ್ಚು ದುಡ್ಡು ಬಂದರೆ ಅದರಲ್ಲಿ ಇನ್ನಷ್ಟು ಸಿನಿಮಾ ಮಾಡಬಹುದು ಎಂಬುದು.

ಒಂದು ದಿನ ಅವರ ಶೂಟ್ ಮುಗಿಸಿ ಬೈಕಿನಲ್ಲಿ ಮನೆಗೆ ಬರುತ್ತಿದ್ದೆ. ಆಗ ಒಂದು ಫೋನ್ ಬಂತು. 'ಹಲೋ...' ಅನ್ನುವ ಆತ್ಮೀಯ ದನಿ. ಆದರೂ 'ಅವರ್‍ಯಾಕೆ ನನಗೆ ಫೋನ್ ಮಾಡ್ತಾರೆ, ದೊಡ್ಡೋರು' ಅಂದುಕೊಂಡರೆ, 'ನಾನು ಪುನೀತ್' ಎಂದ ಹಾಗಾಯ್ತು... ತಕ್ಷಣ ಬೈಕ್ ಪಾರ್ಕ್ ಮಾಡಿ 'ಸಾರ್, ನೀವಾ?' ಅಂದೆ.

'ಹೌದು ಹೌದು ಒಂದು ಒಳ್ಳೆ ಫೋಟೊಶೂಟ್‌ಗೆ ಬೇಕಾಗೋ ಹಾಗೆ ಸ್ಟುಡಿಯೊ ಮಾಡಿದ್ರೆ ವರ್ಕ್ ಆಗುತ್ತಾ? ನಮ್ಮದೊಂದು ಜಾಗ ಇದೆ... ಮಾಡಬಹುದಾ?' ಎಂದು ಕೇಳಿದರು. 'ಆಗುತ್ತೆ ಸಾರ್. ಬೆಂಗಳೂರಲ್ಲಿ ಒಳ್ಳೆಯ ಸ್ಟುಡಿಯೊಗಳ ಕೊರತೆ ಇದೆ' ಅಂತ ಹೇಳಿದೆ. ನಂತರ ಹೊರದೇಶಗಳ ಅತ್ಯುತ್ತಮ ಸ್ಟುಡಿಯೊಗಳ ಚಿತ್ರಗಳೊಟ್ಟಿಗೆ ಒಮ್ಮೆ ಭೇಟಿ ಮಾಡಿ ಮಾತಾಡಿದೆ. ಗ್ರಾಯೇ ಕ್ಲೀನ್‌ಎನರ್ಜಿ ಬಗ್ಗೆ ಎಲ್ಲೋ ತಿಳಿದುಕೊಂಡ ಅವರು ಸೋಲಾರ್